# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)


ನಿಗಮ ಕಛೇರಿ
ನಂ-29, ವಿಜಯನಗರ 2ನೇ
ಹಂತ, ಹಿನಕಲ್, ಮೈಸೂರು-
570007
ವೆಬ್ ಸೈಟ್ : www.cescmysore.org

ಅಧೀಕ್ಷಕ ಇಂಜಿನಿಯರ್(ವಿ).ರವರ ಕಛೇರಿ
ಕಾ ಮತ್ತು ಪಾ ವೃತ್ತ. , ಚಾಮರಾಜನಗರ-ಕೊಡಗು
ಶ್ರೀ ಹರ್ಷ ರಸ್ತೆ, ಚಾ.ವಿ.ಸ.ನಿ.ನಿ.., ಮೈಸೂರು.
ದೂರವಾಣಿ :0821-2420850 ಫ್ಯಾಕ್ಸ್:0821-243477
ಈ-ಮೇಲ್ :seeommys@gmail.com


ಸಂಖ್ಯೆ: ಅಇಂ(ವಿ)/ಕಾನಿಇಂ/ಸಕಾನಿಇಂ/ಕ-127/2019-20/ ದಿನಾಂಕ :-

## ಜನ ಸಂಪರ್ಕ ಸಭೆಯ ನಡಾವಳಿ

ದಿನಾಂಕ 18.06.2019 ಗುರುವಾರದಂದು ಅಪರಾಹ್ನ 12.00 ಘಂಟೆಗೆ ಕುಶಾಲನಗರ ಉಪವಿಭಾಗದಲ್ಲಿ ಶ್ರೀಯುತ ಮಹದೇವ ಸ್ವಾಮಿ ಪ್ರಸನ್ನ, ಅಧೀಕ್ಷಕ ಇಂಜಿನಿಯರ್(ವಿ), ಚಾಮರಾಜನಗರ-ಕೊಡಗು ವೃತ್ತ ಸೆಸ್ಕ್ ಇವರ ಅಧ್ಯಕ್ಷತೆಯಲ್ಲಿ ನಡೆದ ಸಂಪರ್ಕ ಸಭೆಯ ನಡಾವಳಿಗಳು.

ಉಪಸ್ಥಿತರಿದ್ದ ಅಧಿಕಾರಿಗಳು/ಗ್ರಾಮಸ್ಥರು
ಶ್ರೀಯುತರುಗಳಾದ

1. ಶ್ರೀ ಮಹದೇವಸ್ವಾಮಿ ಪ್ರಸನ್ನ, ಅಧೀಕ್ಷಕ ಇಂಜಿನಿಯರ್(ವಿ), ಚಾ.ವಿ.ಸ.ನಿ.ನಿ ಚಾಮರಾಜನಗರ-ಕೊಡಗು ವೃತ್ತ
2. ಶ್ರೀ ಬಿ. ಸೋಮಶೇಖರ್, ಕಾರ್ಯ ನಿರ್ವಾಹಕ ಇಂಜಿನಿಯರ್(ವಿ), ಚಾ.ವಿ.ಸ.ನಿ.ನಿ ಮಡಿಕೇರಿ ವಿಭಾಗ
3. ಶ್ರೀ ಎಂ.ಪಿ ಅಶೋಕ್, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಚಾ.ವಿ.ಸ.ನಿ.ನಿ., ಕುಶಾಲನಗರ ಉಪವಿಭಾಗ.
4. ಶ್ರೀ ವಿನಯ್ ಕುಮಾರ್.ಓ.ಕೆ., ಸಹಾಯಕ ಇಂಜಿನಿಯರ್(ವಿ), ಚಾ.ವಿ.ಸ.ನಿ.ನಿ., ಕುಶಾಲನಗರ ಶಾಖೆ
5. ಶ್ರೀಮತಿ ರಾಣಿ .ಎ .ಕಿರಿಯ ಇಂಜಿನಿಯರ್(ವಿ), ಚಾ.ವಿ.ಸ.ನಿ.ನಿ. ಕುಶಾಲನಗರ ಉಪವಿಭಾಗ
6. ಶ್ರೀ ಬಸವರಾಜು, ಶಾಖಾಧಿಕಾರಿ(ವಿ), ಚಾ.ವಿ.ಸ.ನಿ.ನಿ., ಕೂಡಿಗೆ ಶಾಖೆ
7. ಶ್ರೀಮತಿ ಪ್ರೇಮಲತಾ, ಹಿರಿಯ ಸಹಾಯಕಿ, ಕುಶಾಲನಗರ ಕಂದಾಯ ಶಾಖೆ
8. ಶ್ರೀ ಜೈಯದೀಪ್, ಶಾಖಾಧಿಕಾರಿ(ವಿ), ಚಾ.ವಿ.ಸ.ನಿ.ನಿ., ಸುಂಟಿಕೊಪ್ಪ ಶಾಖೆ
9. ಶ್ರೀ ವಿಜಯ ಬಿ ಭಾದುರವಾಡೆ, ಶಾಖಾಧಿಕಾರಿ(ವಿ), ಚಾ.ವಿ.ಸ.ನಿ.ನಿ.., ಮಾದಾಪುರ ಶಾಖೆ

ಸಭೆಯಲ್ಲಿ ಕುಶಾಲನಗರ ಉಪವಿಭಾಗಕ್ಕೆ ಸಂಬಂಧಿಸಿದಂತೆ ಬಂದ ದೂರುಗಳು ಹಾಗೂ ತೆಗೆದುಕೊಂಡ ಕ್ರಮಗಳು ಈ ಕೆಳಗಿನಂತಿರುತ್ತವೆ.

| ಕ್ರ. ಸಂ | ಗ್ರಾಹಕರ ಹೆಸರು ಮತ್ತು ವಿಳಾಸ | ದೂರಿನ ವಿವರ | ಸಲಹೆ |
|---|---|---|---|
| 1 | ಪಿ.ಎಂ ಚಂಗಪ್ಪ ಮಾಜಿ ಸೈನಿಕ ಬಸವೇಶ್ವರ ಬಡಾವಣೆ ಕುಶಾಲನಗರ | ಗುಮ್ಮನಕೊಲ್ಲಿ ಹಾಗೂ ಮುಳ್ಳುಸೋಗೆ ಗ್ರಾಮದ ಮುಖ್ಯ ರಸ್ತೆ ಬದಿಯಲ್ಲಿರುವ ಪರಿವರ್ತಕವು ಬಾಗಿದ್ದು ಈ ಪರಿವರ್ತಕ ಕೇಂದ್ರದ ಕೆಳಗೆ ಶಾಲೆ ಮಕ್ಕಳು ಮತ್ತು ಸಾರ್ವಜನಿಕರು ಓಡಾಡುತ್ತಿದ್ದು, ಅಪಘಾತ ಸಂಭವಿಸುವ ಸಾಧ್ಯತೆಯಿರುವುದರಿಂದ ಪರಿವರ್ತಕವನ್ನು ಸ್ಥಳಾಂತರಿಸುವಂತೆ ಕೋರಿದರು. | ಇದಕ್ಕೆ ಉತ್ತರಿಸಿದ ಅಧೀಕ್ಷಕ ಇಂಜಿನಿಯರ್(ವಿ) ರವರು ಕೂಡಲೇ ಸ್ಥಳ ಪರಿಶೀಲಿಸಿ 3 ದಿನಗಳೊಳಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಶಾಖಾಧಿಕಾರಿ ರವರಿಗೆ ಸೂಚಿಸಿದರು. |
| 2 | ಜಿ.ಕೆ ಪೊನ್ನಪ್ಪ ನಾಕೂರು ಕಾನ್ ಬೈಲು ಸುಂಟಿಕೊಪ್ಪ | ನಾಕೂರು ಕಾನ್ ಬೈಲು ಗ್ರಾಮದಲ್ಲಿ ವೋಲ್ಟೇಜ್ ಸಮಸ್ಯೆ ಇರುವುದರಿಂದ, ಹೆಚ್ಚುವರಿ ಪರಿವರ್ತಕವನ್ನು ಅಳವಡಿಸುವಂತೆ ಕೋರಿದರು. | ಇದಕ್ಕೆ ಉತ್ತರಿಸಿದ ಅಧೀಕ್ಷಕ ಇಂಜಿನಿಯರ್(ವಿ) ರವರು ವಿದ್ಯುತ್ ವೋಲ್ಟೇಜ್ ಸಮಸ್ಯೆಗೆ ಹೆಚ್ಚುವರಿ ವಿದ್ಯುತ್ ಪರಿವರ್ತಕವನ್ನು ಅಳವಡಿಸಲು ಅಂದಾಜುಪಟ್ಟಿಯನ್ನು ತಯಾರಿಸುವಂತೆ ಶಾಖಾಧಿಕಾರಿ ರವರಿಗೆ ಸೂಚಿಸಿದರು. |
| 3 | ಕೆ ನಾಗರಾಜ ಶೆಟ್ಟಿ ಕೂಡಿಗೆ | ಗಂಗಾ ಕಲ್ಯಾಣ ಯೋಜನೆಯಡಿ ಕಳೆದ ವರ್ಷದಿಂದ ವಿದ್ಯುತ್ ಸಂಪರ್ಕ ಕಲ್ಪಿಸಲು ಬಾಕಿಯಿರುವ ಕಾಮಗಾರಿಯನ್ನು ಕೂಡಲೇ ಪೂರ್ಣಗೊಳಿಸಿ ಕೊಡುವಂತೆ ಸಭೆಯಲ್ಲಿ ತಿಳಿಸಿದರು | ಇದಕ್ಕೆ ಉತ್ತರಿಸಿದ ಅಧೀಕ್ಷಕ ಇಂಜಿನಿಯರ್(ವಿ) ರವರು ಗಂಗಾ ಕಲ್ಯಾಣ ಯೋಜನೆಯಡಿ ವಿದ್ಯುತ್ ಸಂಪರ್ಕ ಕಲ್ಪಿಸಲು ಆವಾರ್ಡ್ ನೀಡಿದ್ದು, ಕೂಡಲೇ ಕಾಮಗಾರಿ ಪೂರ್ಣಗೊಳಿಸಿ ಕೊಡುವುದಾಗಿ ಸೂಚಿಸಿದರು. |

| | | | |
|---|---|---|---|
| 4 | ಕೆ ನಾಗರಾಜ ಶೆಟ್ಟಿ<br>ಕೂಡಿಗೆ | ಗ್ರಾಮಾಂತರ ಪ್ರದೇಶದಲ್ಲಿ ಇಪ್ಪತ್ತು ವರ್ಷದಿಂಧ ಅಳವಡಿಸಿರುವ ಟ್ರಾನ್ಸ್ ಫಾರ್ಮರ್‌ಗಳು ಹಾಗೂ ವಿದ್ಯುತ್ ಸರಬರಾಜಿಗೆ ಎಳೆದಿರುವ ತಂತಿಗಳು ತುಂಡಾಗಿ ಬೀಳುವ ಸ್ಥಿತಿಯಲ್ಲಿದ್ದು, ಅದನ್ನು ಸರಿಪಡಿಸಿಕೊಡುವಂತೆ ಕೋರಿದರು. | ಇದಕ್ಕೆ ಉತ್ತರಿಸಿದ ಅಧೀಕ್ಷಕ ಇಂಜಿನಿಯರ್(ವಿ) ರವರು ಕೂಡಲೇ ಸ್ಥಳ ಪರಿಶೀಲಿಸಿ ವರದಿಯನ್ನು ನೀಡುವಂತೆ ಶಾಖಾಧಿಕಾರಿ ರವರಿಗೆ ಸೂಚಿಸಿದರು. |
| 5 | ದೇವರಾಜು<br>ನೇತಾಜಿ ಬಡಾವಣೆ<br>ಬಿ.ಎಂ ರಸ್ತೆ<br>ಕುಶಾಲನಗರ | ಬೈಚನಹಳ್ಳಿ ಗ್ರಾಮದಲ್ಲಿ ಕಂಬಗಳು ಬಿದ್ದಿದ್ದು, ಅದನ್ನು ಇನ್ನೂ ತೆರವುಗೊಳಿಸಿರುವುದಿಲ್ಲ ಅದನ್ನು ತೆರವುಗೊಳಿಸಿಕೊಡಬೇಕಾಗಿ ಕೋರಿದರು | ಇದಕ್ಕೆ ಉತ್ತರಿಸಿದ ಅಧೀಕ್ಷಕ ಇಂಜಿನಿಯರ್(ವಿ) ರವರು ಕೂಡಲೇ ಸ್ಥಳ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಶಾಖಾಧಿಕಾರಿ ರವರಿಗೆ ಸೂಚಿಸಿದರು. |
| 6 | ಕಾವೇರಪ್ಪ<br>ಸೀಗೆಹೊಸೂರು ಗ್ರಾಮ<br>ಕೂಡಿಗೆ | ಸೀಗೆಹೊಸೂರು ಮತ್ತು ಹುಣಸೆಪಾರೆ ಗ್ರಾಮದಲ್ಲಿ ಎಳೆದಿರುವ ವಯರ್‌ಗಳನ್ನು ಬದಲಾಯಿಸಿ ಕೊಡಬೇಕಾಗಿ ಕೋರಿದರು. | ಇದಕ್ಕೆ ಉತ್ತರಿಸಿದ ಅಧೀಕ್ಷಕ ಇಂಜಿನಿಯರ್(ವಿ) ರವರು ಕೂಡಲೇ ಸ್ಥಳ ಪರಿಶೀಲಿಸಿ ೩ ದಿನಗಳೊಳಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಶಾಖಾಧಿಕಾರಿ ರವರಿಗೆ ಸೂಚಿಸಿದರು. |
| 7 | ಗಣೇಶ್<br>ಕೂಡುಮಂಗಳೂರು<br>ಕೂಡಿಗೆ | ದೊಡ್ಡತ್ತೂರಿನಿಂದ ಹಾರಂಗಿ ರಸ್ತೆವರೆಗೆ ಬೀದಿ ದೀಪ ವ್ಯವಸ್ಥೆ ಇಲ್ಲದೇ ಇರುವುದರಿಂದ, ಸಾರ್ವಜನಿಕರಿಗೆ ತೊಂದರೆ ಉಂಟಾಗಿರುವುದಾಗಿ ತಿಳಿಸಿದರು. | ಇದಕ್ಕೆ ಉತ್ತರಿಸಿದ ಅಧೀಕ್ಷಕ ಇಂಜಿನಿಯರ್(ವಿ) ರವರು ಬೀದಿ ದೀಪ ವ್ಯವಸ್ಥೆಯನ್ನು ಪಂಚಾಯಿತಿ ವತಿಯಿಂದ ನೊಂದಾಯಿಸಬೇಕಾಗಿ ತಿಳಿಸಿದರು. |

ಕಾರ್ಯನಿರ್ವಾಹಕ ಇಂಜಿನಿಯರ್ (ವಿ)
ಸೆಸ್ಕ್ ಕಾರ್ಯ ಮತ್ತು ಪಾಲನೆ ವಿಭಾಗ
ಕಾ ಮತ್ತು ಪಾ ವೃತ್ತ, ಚಾ.ವಿ.ಸ.ನಿ.ನಿ.,
ಚಾಮರಾಜನಗರ-ಕೊಡಗು.
ಮಡಿಕೇರಿ

ಪ್ರತಿಯನ್ನು

1. ಮುಖ್ಯ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ ವಲಯ, ಚಾ.ವಿ.ಸ.ನಿ.ನಿ.,ಮೈಸೂರು ರವರಿಗೆ ಸಲ್ಲಿಸಲಾಗಿದೆ.
2. ಪ್ರಧಾನ ವ್ಯವಸ್ಥಾಪಕರು(ವಾ) ನಿಗಮ ಕಛೇರಿ, ಚಾ.ವಿ.ಸ.ನಿ.ನಿ.,ಮೈಸೂರು.
3. ವ್ಯವಸ್ಥಾಪಕ ನಿರ್ದೇಶಕರ ಕಾರ್ಯ ನಿರ್ವಾಹಕ ಸಹಾಯಕರು, ನಿಗಮ ಕಛೇರಿ, ಚಾ.ವಿ.ಸ.ನಿ.ನಿ.,ಮೈಸೂರು.
4. ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ ವಿಭಾಗ, ಚಾ.ವಿ.ಸ.ನಿ.ನಿ., ಮಡಿಕೇರಿ ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
5. ನಿರ್ದೇಶಕರು(ತಾ) ರವರ ತಾಂತ್ರಿಕ ಸಹಾಯಕರು, ನಿಗಮ ಕಛೇರಿ, ಚಾ.ವಿ.ಸ.ನಿ.ನಿ.,ಮೈಸೂರು.
6. ಸಹಾಯಕ ಕಾರ್ಯಪಾಲಕ ಇಂಜಿನಿಯರ್(ವಿ),ಕಾರ್ಯ ಮತ್ತು ಪಾಲನೆ ಉಪವಿಭಾಗ, ಚಾ.ವಿ.ಸ.ನಿ.ನಿ, ಕುಶಾಲನಗರ.
7. ಕಚೇರಿ ಪ್ರತಿ.